been credited during the year 1957-58, up till now;

(*b*) whether the amounts have not been distributed as yet among the various local bodies that are entitled to a share of it by way of compensation?

A.—Sri B. D. JATTI (Chief Minister).—

(*a*) 1957-58 ... Rs. 2,19,97,392.00
1958-59 ... Rs. 2,41,99,857.61

(From 1st April 1958 to 31st January 1959)

The amount is credited to the Budget Head "XII Taxes on Vehicles."

(*b*) Local Bodies which were already in receipt of compensation amounts under different Motor Vehicles Taxation Acts in force in different areas of the State prior to the introduction of new Mysore Motor Vehicles Taxation Act, 1957 from 1st January 1958 have been paid compensation up-to-date. As regards local bodies which are eligible to compensation under Section 20 (1) (ii) of the Mysore Motor Vehicles Taxation Act, 1957 the question of fixing compensation amounts to them is under consideration of the Government.

Sri GAJANANA PANDIT.—What is the share of the South Kanara District?

Sri B. D. JATTI.—I have not worked on figures separately for South Kanara.

Sri GAJANANA PANDIT.—Is there any decrease or increase in the compensation amount?

Sri B. D. JATTI.—I have no figures.

Sri M. C. NARASIMHAN.—What is the difficulty in the Government arriving at these figures as per section 20 (1) (ii) of the Mysore Motor Vehicles Taxation Act?

Sri B.D. JATTI.—Information has to be received from different districts. They have to collect correctly and work out. We cannot work out and give compensation.

Sri M. C. NARASIMHAN.—What is the difficulty in giving compensation to those areas which have already furnished returns?

Sri B. D. JATTI.—Wherever they have furnished there is no difficulty. But we have not received so far.

Sanctioning of High School for Dudda Hobli in Hassan Taluk.

*Q—571. Smt. DYAVAMMA (Gandasi).—

Will the Government be pleased to state:—

(*a*) whether they are aware of the fact that the total number of pupils both boys and girls passing out of Middle Schools in Dudda Hobli, Hassan Taluk, every year exceeds three hundred;

(*b*) whether they propose to run a Government High School in case the villagers deposit the amount fixed by the Education Department?

A.—Sri ANNA RAO GANAMUKHI (Minister for Education).—

(*a*) No.
(*b*) No.

ಶ್ರೀಮತಿ ದ್ಯಾವಮ್ಮ.—ಈ ಹೋಬಳಿಯಲ್ಲಿ ಮಾಧ್ಯಮಿಕ ಶಾಲೆಗಳು ಎಷ್ಟಿವೆಯೆಂಬುದು ಸರ್ಕಾರದವರಿಗೆ ಗೊತ್ತಿದೆಯೇ?

ಶ್ರೀ ಅಣ್ಣಾರಾವ್ ಗಣಮುಖಿ.—ಮಾಧ್ಯಮಿಕ ಶಾಲೆಗಳು ಹತ್ತು ಇವೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಎಷ್ಟು ಜನ ವಿದ್ಯಾರ್ಥಿಗಳು ಪ್ರತಿ ವರ್ಷವೂ ಶಾಲೆಗೆ ಹೋಗುತ್ತಾರೆ?

ಶ್ರೀ ಅಣ್ಣಾರಾವ್ ಗಣಮುಖಿ.—ಸರಾಸರಿ 73.

ಶ್ರೀ ಬಿ. ಎಕ್. ಬೋರಣ ಗೌಡ.—ಈ ಹೋಬಳಿಗೆ ಒಂದು ಹೈಸ್ಕೂಲನ್ನು ಕೊಡುವುದಕ್ಕೆ ಯೋಚನೆ ಮಾಡುತ್ತೀರಾ?

ಶ್ರೀ ಅಣ್ಣಾರಾವ್ ಗಣಮುಖಿ.—ಹೈಸ್ಕೂಲನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಆ ಹೋಬಳಿಯ ವಿದ್ಯಾರ್ಥಿಗಳು ಸುಮಾರು 20 ಮೈಲಿಗಳಲ್ಲಿರತಕ್ಕ ಶಾಲೆಗೆ ಹೈಸ್ಕೂಲ್ ವಿದ್ಯಾಭ್ಯಾಸಕ್ಕಾಗಿ ಹೋಗುತ್ತಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಅಣ್ಣಾರಾವ್ ಗಣಮುಖಿ.—ಈಗಾಗಲೇ ಹಾಸನದಲ್ಲಿ ಮೂರು ಹೈಸ್ಕೂಲುಗಳಿವೆ. ಒಂದು ಗಂಡುಮಕ್ಕಳ ಹೈಸ್ಕೂಲು; ಇನ್ನೆರಡು ಹೆಣ್ಣುಮಕ್ಕಳ ಹೈಸ್ಕೂಲುಗಳು. ಈ ರೀತಿ ಇರುವುದರಿಂದ ವಿದ್ಯಾರ್ಥಿಗಳಿಗೆ ಅಷ್ಟಾಗಿ ತೊಂದರೆಯಾಗಲಾರದು.

ಶ್ರೀ ಟಿ. ಎಕ್. ಬೋರಣ್ಣಗೌಡ.—ಈ ಹೋಬಳಿಗೂ ಹಾಸನಕ್ಕೂ ಇರುವ ದೂರ ಸುಮಾರು 20 ಮೈಲಿಗಳಾಗುತ್ತದೆಂಬುದು ಸರ್ಕಾರಕ್ಕೆ ಗೊತ್ತಿದೆಯೇ?

ಶ್ರೀ ಅಣ್ಣಾರಾವ್ ಗಣಮುಖಿ.—ಇರಬಹುದು. ಆದರೆ ಕೆಲವು ಸ್ಕೂಲುಗಳು 10 ಮೈಲಿ ದೂರದಲ್ಲಿವೆ. ಮತ್ತೆ ಕೆಲವು ಎಂಟು ಮೈಲಿಗಳ ದೂರದಲ್ಲಿವೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಈ ಹೋಬಳಿಯ ವಿದ್ಯಾರ್ಥಿಗಳು 20 ಮೈಲಿಗಳ ದೂರದಲ್ಲಿರತಕ್ಕ ಹಾಸನದ ಹೈಸ್ಕೂಲುಗಳಿಗೆ ಹೋಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಅಣ್ಣಾರಾವ್‌ಗಣಮುಖಿ.—ಅದು ನನ್ನ ಅವಗಾಹನೆಗೆ ಬಂದಿಲ್ಲ. ನನ್ನ ಅಭಿಪ್ರಾಯದ ಪ್ರಕಾರ ಈ ಹೋಬಳಿಯಿಂದ ಎಂಟು ಮೈಲಿಗಳ ದೂರದಲ್ಲಿ ಹಾಸನ ಇದೆಯೆಂದು ಹೇಳುತ್ತೇನೆ.

ಶ್ರೀ ಎಸ್. ಆರ್. ರಾಮಯ್ಯ.—ಎಜುಕೇಷನ್ ರಿಫಾರಮ್‌ನ ಪ್ರಕಾರ ಇಲ್ಲಿಗೆ ಒಂದು ಹೈಸ್ಕೂಲನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೀರಾ?

ಶ್ರೀ ಅಣ್ಣಾರಾವ್‌ಗಣಮುಖಿ.—ಆ ರೀತಿ ತೀರ್ಮಾನ ಇಲ್ಲ. ಈಗಿನ ಸರ್ವೆಪ್ರಕಾರ ಇಲ್ಲಿ ಹೈಸ್ಕೂಲ್ ಆಗಲಿಕ್ಕಿಲ್ಲ.

ಶ್ರೀ ಎಸ್. ಆರ್. ರಾಮಯ್ಯ.—ಹಾಗಿದ್ದ ಪಕ್ಷದಲ್ಲಿ 10 ಮೈಲಿಗಳ ರೇಡಿಯಸ್ಸಿನೊಳಗೆ ಏನಾದರೂ ಈ ನೀತಿಯನ್ನು ಅನುಸರಿಸಬೇಕೆಂದು ಇದ್ದಾರೆಯೇ?

ಶ್ರೀ ಅಣ್ಣಾರಾವ್ ಗಣಮುಖಿ.—ಅದೇನೂ ಇಲ್ಲ. ಆದರೆ ಮುನಿಸಿಪಾಲಿಟಿಯವರಾಗಲಿ, ಡಿಸ್ಟ್ರಿಕ್ಟ್ ಬೋರ್ಡಿನವರಾಗಲಿ ಅಥವಾ ಖಾಸಗಿ ಸಂಸ್ಥೆಯವರಾಗಲಿ ಇಲ್ಲಿ ಹೈಸ್ಕೂಲನ್ನು ಕಟ್ಟಿಸಿದೇ ಹೋದರೆ ಆಗ ಸರ್ಕಾರ ಒಂದು ಹೈಸ್ಕೂಲನ್ನು ತೆಗೆಯಬೇಕೆಂಬ ಒಂದು ನೀತಿಯನ್ನಿಟ್ಟುಕೊಂಡಿದೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಎಷ್ಟು ಮೈಲಿಗಳ ರೇಡಿಯಸ್ಸಿನಲ್ಲಿ ಒಂದು ಹೈಸ್ಕೂಲನ್ನು ತೆಗೆಯಬೇಕೆಂಬ ನೀತಿಯನ್ನು ಹಾಕಕೊಂಡಿದ್ದೀರಿ?

ಶ್ರೀ ಅಣ್ಣಾರಾವ್‌ಗಣಮುಖಿ.—ಈಗಿನ ಸರ್ವೆ ಪ್ರಕಾರ ಕೇವಲ ಐದು ಅಥವಾ ಎಂಟು ಮೈಲಿಗಳ ರೇಡಿಯಸ್ಸಿನಲ್ಲಿ ಒಂದು ಹೈಸ್ಕೂಲು ಇರಬೇಕೆಂದಿದೆ.

Repairs to Channarayapatna—Bagur Road.

*Q.—578. Smt. DYAVAMMA (Gandasi).—

Will the Government be pleased to state :—

(*a*) the date of receipt of representation requesting them to carry out repairs to the 7 mile long road from Channarayapatna to Bagur Hobli ;

(*b*) whether they are aware of the fact that the people are experiencing hardships for lack of communication facilities and that the repair work has not yet commenced despite submission of such representation ;

(*c*) if so, whether they will carry out repairs to the above road this year?

•

*A.—Sri T. SUBRAMANYA (Minister for Law, Labour and Local Self-Government).—

(*a*) 8th November 1956 urging that the road may be transferred to the Public Works Department and improved by Government.

(*b*) Yes. The road is not in a good condition for vehicular traffic in all seasons.

(*c*) Metalling and construction of some culverts and causeways will be taken up by the District Board, Hassan, as and when its funds permit.

ಶ್ರೀಮತಿ ದ್ಯಾವಮ್ಮ.—ಸುಮಾರು 10-12 ವರ್ಷಗಳಿಂದ ಈ ರಸ್ತೆಯ ಪುರಸ್ತಿ ಕೆಲಸವಾಗ ಬೇಕೆಂದು ಸರ್ಕಾರಕ್ಕೆ ಮನವಿಗಳು ಬಂದಿವೆಯೇ?

ಶ್ರೀ ಟಿ. ಸುಬ್ರಹ್ಮಣ್ಯ.—ಬಂದಿವೆ. 10-12 ವರ್ಷಗಳಿಂದ ಮಾತ್ರವೇ ಅಲ್ಲದೆ ಬಹು ಕಾಲದಿಂದ ಮನವಿಗಳು ಬಂದಿವೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಈ ರಸ್ತೆ ಬಹಳ ಪ್ರಮುಖವಾದುದು ಎಂದು ಸರ್ಕಾರಕ್ಕೆ ಗೊತ್ತಾಗಿದೆಯೇ?

ಶ್ರೀ ಟಿ. ಸುಬ್ರಹ್ಮಣ್ಯ.—ಬಹಳ ಮುಖ್ಯವಾದುದು ಎಂದು ಗೊತ್ತಾಗಿದೆ.

Smt. VIJAYA RAGHAVENDRA RAO.—How many culverts and causeways are there?

Sri T. SUBRAMANYA.—The exact number is not before me.

†ಶ್ರೀಮತಿ ದ್ಯಾವಮ್ಮ.—ಈ ರಸ್ತೆ ರಿಪೇರಿ ಆಗದಿರುವುದರಿಂದ, ಸುಮಾರು 40-50 ಹಳ್ಳಿಗಳಲ್ಲಿ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಸುಬ್ರಹ್ಮಣ್ಯ.—ಬಂದಿದೆ. ಇದರಲ್ಲಿ ಒಂದು ವಿಷಯವನ್ನು ಹೇಳಬೇಕಾಗಿದೆ. ಈ ರಸ್ತೆ ರಿಪೇರಿಯನ್ನು ಬಹಳ ದಿವಸಗಳಿಂದ ಸರ್ಕಾರದವರೇ ತೆಗೆದುಕೊಳ್ಳಬೇಕೆಂದಿದ್ದರು. ಆದರೆ ಈಗ ಡಿಸ್ಟ್ರಿಕ್ಟ್ ಬೋರ್ಡ್, ಲೋಕಲ್ ಬೋರ್ಡ್ ಅಕ್ಟ್‌ಗಳೇನಿವೆ ಅವು ಪಾಸಾದಮೇಲೆ ಪ್ರತಿಯೊಂದು ಹೋಬಳಿಯಲ್ಲಿ ಯಾವಯಾವುವು ಅತಿ ಪ್ರಾಮುಖ್ಯವಾದ ರಸ್ತೆಗಳಿವೆಯೋ ಅವುಗಳ ರಿಪೇರಿ ಕೆಲಸವನ್ನು ಪಿ.ಡಬ್ಲ್ಯು.ಡಿ. ಯವರು ತೆಗೆದುಕೊಳ್ಳಬೇಕೆಂದು ಹೇಳಿದೆ. ಆ ಸಮಯದಲ್ಲಿ ಈ ರಸ್ತೆ ಅತಿ ಪ್ರಾಮುಖ್ಯವಾದುದೆಂದು ಅನೇಕ ಮನವಿಗಳು ಬಂದಿರುವುದರಿಂದ ಅದನ್ನೂ ಸಹ ತೆಗೆದುಕೊಳ್ಳಬೇಕೆಂದು ಯೋಚನೆ ಮಾಡುತ್ತೇವೆ. ಎರಡನೆಯದಾಗಿ ಹೋದ ವರ್ಷ ರೂರಲ್ ಕಮ್ಯೂನಿಕೇಷನ್ ಗ್ರಾಂಟಿನಲ್ಲಿ ಹಾಸನದ ಡಿಸ್ಟ್ರಿಕ್ಟ್ ಬೋರ್ಡಿಗೆ 99 ಸಾವಿರ 310 ರೂಪಾಯಿಗಳನ್ನು ಈ ಬಾಬಿಗೆ ಕೊಟ್ಟಿದ್ದೇವೆ. ಈ ವರ್ಷವೂ ಅಷ್ಟೇ ದುಡ್ಡನ್ನು ಕೊಟ್ಟಿದ್ದೇವೆ. ಆದರೂ ಸಾಧ್ಯವಾದಷ್ಟು ಜಾಗ್ರತೆ ರಸ್ತೆ ರಿಪೇರಿ ಕೆಲಸವನ್ನು ಮಾಡಬೇಕೆಂದು ಜಿಲ್ಲಾ ಬೋರ್ಡಿಗೆ ತಿಳಿಸುತ್ತೇವೆ.

ಶ್ರೀಮತಿ ದ್ಯಾವಮ್ಮ.—ಈ ವರ್ಷ ಇನ್ನೂ ಏನೂ ರಸ್ತೆ ರಿಪೇರಿಯ ಕೆಲಸವನ್ನು ಮಾಡಲಿಲ್ಲವೇ?

ಶ್ರೀ ಟಿ. ಸುಬ್ರಹ್ಮಣ್ಯ.—ಈ ವರ್ಷ ಪೂರ್ತಿಯಾಗಿ ಮಾಡಲಿಕ್ಕಾಗಲಿಲ್ಲ. ಹಿಂದಿನ ಎಸ್ಟಿಮೇಟ್ ಪ್ರಕಾರ 50 ಸಾವಿರ ರೂಪಾಯಿಗಳಾಗುತ್ತದೆ. ಡಿಸ್ಟ್ರಿಕ್ಟ್ ಬೋರ್ಡಿನವರು ಅಷ್ಟೊಂದು ದುಡ್ಡನ್ನು ಒಂದು ವರ್ಷದಲ್ಲಿಯೇ ಖರ್ಚು ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಈಗ ಸ್ವಲ್ಪಭಾಗ ಮುಟ್ಟಿಗಾದರೂ ರಸ್ತೆ ರಿಪೇರಿ ಮಾಡಿ ಎಂದು ನೂಡನೆ ಕೊಡುತ್ತೇವೆ.